## ಸಾಲಿಗರಿಗೆ ನ್ಯಾಯಸಮ್ಮತ ಪದ್ಧತಿಗಳ ಸಂಹಿತೆ ಬಗ್ಗೆ ಮಾರ್ಗಸೂಚಿಗಳು

ಡಿಬಿಒಡಿ.ಎಲ್ಇಜಿ. ಸಂಖ್ಯೆ ಬಿಸಿ.104/09.07.007/2002–03 ಮೇ 5, 2003

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ/ ಅಖಿಲ ಭಾರತ ಹಣಕಾಸು ಸಂಸ್ಥೆಗಳಿಗೆ
(ಆರ್ಆರ್ಬಿ ಗಳು ಮತ್ತು ಎಲ್ಎಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ಸಾಲಿಗರಿಗೆ ನ್ಯಾಯಸಮ್ಮತ ಪದ್ಧತಿಗಳ ಸಂಹಿತೆ ಬಗ್ಗೆ ಮಾರ್ಗಸೂಚಿಗಳು**

ಭಾರತ ಸರ್ಕಾರವು ರಚಿಸಿದ ಸಾಲಿಗರ ಹೊಣೆಗಾರಿಕೆ ಕಾನೂನುಗಳ ಕುರಿತ ಕಾರ್ಯ ತಂಡವು ಮಾಡಿರುವ ಶಿಫಾರಸುಗಳ ಆಧಾರದ ಮೇಲೆ ಸರ್ಕಾರ, ಆಯ್ದ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಸಾಲಿಗರಿಗೆ ನ್ಯಾಯಸಮ್ಮತ ಪದ್ಧತಿಗಳ ಸಂಹಿತೆಯನ್ನು ಜಾರಿಗೆ ತರುವುದರ ಕಾರ್ಯಸಾಧ್ಯತೆಯ ಬಗ್ಗೆ ನಾವು ಪರಿಶೀಲಿಸಿದ್ದೇವೆ. ಮಾರ್ಗಸೂಚಿಗಳನ್ನು ಅಂತಿಮಗೊಳಿಸಲಾಗಿದೆ ಮತ್ತು ಬ್ಯಾಂಕುಗಳು/ಅಖಿಲಭಾರತ ಹಣಕಾಸು ಸಂಸ್ಥೆಗಳಿಗೆ ಈ ಮುಂದಿನ ಸ್ಥೂಲ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಮತ್ತು ತಮ್ಮ ನಿರ್ದೇಶಕರ ಮಂಡಲಿಯು ಅನುಮೋದಿಸಿದ ನ್ಯಾಯಪರವಾದ ಪದ್ಧತಿಗಳ ಸಂಹಿತೆಯನ್ನು ರಚಿಸಲು ಸೂಚಿಸಲಾಗಿದೆ.

**2. ಮಾರ್ಗಸೂಚಿಗಳು**

**(i) ಸಾಲಗಳಿಗೆ ಅರ್ಜಿಗಳು ಮತ್ತು ಅವುಗಳ ಸಂಸ್ಕರಣೆ**

(ಎ) 2.00 ಲಕ್ಷ ರೂಪಾಯಿಗಳವರೆಗಿನ ಆದ್ಯತಾ ವಲಯ ಮುಂಗಡಗಳ ಸಂಬಂಧದಲ್ಲಿ ಸಾಲ ಅರ್ಜಿಯ ನಮೂನೆಗಳು ಸಮಗ್ರ ಸ್ವರೂಪದ್ದಾಗಿರಬೇಕು. ಅಂತಹ ಅರ್ಜಿಯು, ಪರಿಶೀಲನೆಗೆ ಸಂದಾಯ ಮಾಡಬೇಕಾದ ಶುಲ್ಕಗಳು/ಚಾರ್ಜುಗಳು, ಯಾವುವಾದರೂ ಇದ್ದರೆ ಅರ್ಜಿ ಅಂಗೀಕಾರವಾಗದಿರುವ ಸಂದರ್ಭದಲ್ಲಿ ಹಿಂದಿರುಗಿಸಬೇಕಾದ ಅಂಥ ಶುಲ್ಕಗಳ ಮೊಬಲಗು, ಸಂದಾಯಪೂರ್ವ ಆಯ್ಕೆಗಳು ಮತ್ತು ಸಾಲಗಾರರ ಹಿತಾಸಕ್ತಿಗೆ ಬಾಧಕ ಉಂಟುಮಾಡುವಂಥ ಯಾವುದೇ ಇತರ ವಿಷಯ ಇವುಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿರಬೇಕು. ಅದರಿಂದ ಇತರ ಬ್ಯಾಂಕುಗಳ ಶುಲ್ಕಗಳೊಂದಿಗೆ ಅರ್ಥಪೂರ್ಣ ಹೋಲಿಕೆ ಮಾಡಬಹುದು ಮತ್ತು ಸಾಲಗಾರನು ವಿವೇಕಯುತ ಬುದ್ಧಿವಂತಿಕೆಯ ನಿರ್ಧಾರ ತೆಗೆದುಕೊಳ್ಳಬಹುದು.

(ಬಿ) ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಎಲ್ಲಾ ಸಾಲದ ಅರ್ಜಿಗಳನ್ನು ಸ್ವೀಕರಿಸಿದ್ದಕ್ಕೆ ಸ್ವೀಕೃತಿ ಪತ್ರವನ್ನು ನೀಡುವ ವ್ಯವಸ್ಥೆಯನ್ನು ರೂಪಿಸತಕ್ಕದ್ದು. 2 ಲಕ್ಷ ರೂಪಾಯಿಗಳವರೆಗಿನ ಸಾಲದ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವಂಥ ಸಮಯ ಮಿತಿಯನ್ನು ಸಹಾ ಅಂಥ ಅರ್ಜಿಗಳ ಸ್ವೀಕೃತಿ ಪತ್ರಗಳಲ್ಲಿ ಸೂಚಿಸತಕ್ಕದ್ದು.

(ಸಿ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು ಯುಕ್ತ ಸಮಯಾವಧಿಯೊಳಗೆ ಸಾಲದ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು. ಹೆಚ್ಚಿನ ವಿವರಗಳು/ ದಸ್ತಾವೇಜುಗಳು ಅಗತ್ಯವಿದ್ದರೆ, ಸಾಲಗಾರರಿಗೆ ಆ ಬಗ್ಗೆ ಕೂಡಲೇ ತಿಳಿಸತಕ್ಕದ್ದು.

(ಡಿ) 2 ಲಕ್ಷ ರೂಪಾಯಿಗಳವರೆಗೆ ಸಾಲಗಳನ್ನು ಕೋರುವ ಸಣ್ಣ ಸಾಲಗಾರರ ವಿಷಯದಲ್ಲಿ, ಸಾಲಿಗರು ಸೂಕ್ತ ಪರಿಶೀಲನೆಯ ನಂತರ ಬ್ಯಾಂಕಿನ ಅಭಿಪ್ರಾಯದಲ್ಲಿ ಗೊತ್ತುಪಡಿಸಿದ ಸಮಯದೊಳಗೆ ಸಾಲದ ಅರ್ಜಿಗಳ ತಿರಸ್ಕರಣೆಗೆ ಅವಕಾಶ ಮಾಡಿಕೊಟ್ಟ ಮುಖ್ಯ ಕಾರಣವನ್ನು/ಗಳನ್ನು ಲಿಖಿತದಲ್ಲಿ ತಿಳಿಸತಕ್ಕದ್ದು.

**(ii) ಸಾಲದ ಮೌಲ್ಯಾಂಕನ ಮತ್ತು ನಿಬಂಧನೆಗಳು/ಷರತ್ತುಗಳು**

(ಎ) ಸಾಲಗಾರರು ಸಾಲದ ಅರ್ಜಿಯನ್ನು ಸಮರ್ಪಕವಾಗಿ ನಿರ್ಧರಣೆ ಮಾಡುವಂತೆ ಸಾಲಿಗರು ನೋಡಿಕೊಳ್ಳತಕ್ಕದ್ದು. ಸಾಲಗಾರನಿಗೆ ಸಾಲ ಪಡೆಯಲು ಇರುವ ಅರ್ಹತೆಯ ಬಗ್ಗೆ ಯುಕ್ತ ಕಾರ್ಯತತ್ಪರತೆಗೆ ಬದಲಿಯಾಗಿ ಅವರು ಮೂಲಧನ ಮತ್ತು ಭದ್ರತೆ ಗೊತ್ತುಪಾಡನ್ನು ಬಳಸತಕ್ಕದ್ದಲ್ಲ.

(ಬಿ) ಸಾಲಿಗನು ಸಾಲದ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ಅದರ ಮಿತಿಯನ್ನು ಸಾಲಗಾರನಿಗೆ ತಿಳಿಸತಕ್ಕದ್ದು ಹಾಗೂ ಸಾಲಗಾರನು ತನ್ನ ಪೂರ್ಣ ತಿಳಿವಳಿಕೆಯೊಂದಿಗೆ ಈ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಒಪ್ಪಿರುವುದನ್ನು ದಾಖಲೆಯಲ್ಲಿ ದಾಖಲಿಸಿಡತಕ್ಕದ್ದು.

(ಸಿ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು ನೀಡಿರುವ ಸಾಲ ಸೌಲಭ್ಯಗಳಿಗೆ ಅನ್ವಯಿಸುವ ನಿಬಂಧನೆಗಳು ಮತ್ತು ಷರತ್ತುಗಳನ್ನು ಹಾಗೂ ಇತರ ಷರತ್ತುಗಳನ್ನು ಸಾಲ ನೀಡುವ ಸಂಸ್ಥೆಯು ಮಾತುಕತೆ ನಡೆಸಿದ ನಂತರ ಗೊತ್ತುಮಾಡತಕ್ಕದ್ದು ಮತ್ತು ಸಾಲಗಾರನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಅಧಿಕೃತ ಅಧಿಕಾರಿಯು ವಿದ್ಯುಕ್ತವಾಗಿ ದೃಢೀಕರಿಸತಕ್ಕದ್ದು. ಸಾಲ ಒಪ್ಪಂದ ಪತ್ರದಲ್ಲಿ ಸೂಚಿಸಿರುವ ಎಲ್ಲಾ ಲಗತ್ತುಗಳಲ್ಲಿ ಪ್ರತಿಯೊಂದರ ಪ್ರತಿಯ ಜೊತೆಗೆ ಸಾಲ ಒಪ್ಪಂದ ಪತ್ರದ ಪ್ರತಿಯನ್ನು ಸಾಲಗಾರನಿಗೆ ಒದಗಿಸತಕ್ಕದ್ದು.

(ಡಿ) ಸಾಲ ಒಪ್ಪಂದ ಪತ್ರದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ, ಸಾಲ ಸೌಲಭ್ಯಗಳು ಸಾಲಿಗನ ಪರಿಪೂರ್ಣ ವಿವೇಚನೆಗೆ ಒಳಪಟ್ಟಿರುತ್ತವೆ ಎಂಬುದನ್ನು ಸ್ಪಷ್ಟವಾಗಿ ಗೊತ್ತುಪಡಿಸಿರಬೇಕು. ಇವು ಮಂಜೂರು ಮಾಡಿದ ಮಿತಿಗಳಿಗೆ ಮೀರಿ ಹಣ ತೆಗೆಯುವುದು, ಸಾಲ ಮಂಜೂರಾತಿ ಪತ್ರದಲ್ಲಿ ವಿಶೇಷವಾಗಿ ಒಪ್ಪಿಕೊಂಡಿರುವುಗಳಲ್ಲದ ಇತರ ಉದ್ದೇಶಗಳಿಗೆ ನೀಡಿದ ಚೆಕ್ಕುಗಳನ್ನು ಮಾನ್ಯ ಮಾಡುವುದು ಮತ್ತು ಅನುತ್ಪಾದಕ ಜಡ ಆಸ್ತಿಯಾಗಿ ಅದನ್ನು ವರ್ಗೀಕರಿಸಿದ ಮೇಲೆ ಅಥವಾ ಮಂಜೂರಾತಿಯ ನಿಬಂಧನೆಗಳನ್ನು ಪಾಲಿಸದ ಕಾರಣದಿಂದಾಗಿ ಸಾಲದ ಖಾತೆಯಲ್ಲಿ ಹಣ ತೆಗೆಯಲು ಅನುಮತಿಸದಿರುವುದು ಮುಂತಾದಂಥ ಸೌಲಭ್ಯಗಳಿಗೆ ಅನುಮೋದನೆ ಅಥವಾ ಅನುಮತಿಸದಿರುವುದು ಸೇರುತ್ತದೆ. ಸಾಲದ ಮಿತಿಗಳನ್ನು ಯುಕ್ತವಾಗಿ ಪರಿಶೀಲಿಸದೆ ವ್ಯಾಪಾರದಲ್ಲಿ ಬೆಳವಣಿಗೆ ಇತ್ಯಾದಿ ಕಾರಣದಿಂದಾಗಿ ಸಾಲಗಾರರ ಹೆಚ್ಚಿನ ಅಗತ್ಯತೆಗಳನ್ನು ಪೂರೈಸುವ ಹೊಣೆಗಾರಿಕೆ ಸಾಲಿಗನದಲ್ಲ ಎಂದು ಸಹಾ ಅದರಲ್ಲಿ ಸ್ಪಷ್ಟವಾಗಿ ತಿಳಿಸಿರಬೇಕು.

(ಇ) ಒಕ್ಕೂಟ ವ್ಯವಸ್ಥೆ ಅಡಿಯಲ್ಲಿ ಸಾಲ ನೀಡುವ ಸಂದರ್ಭದಲ್ಲಿ, ಭಾಗವಹಿಸುತ್ತಿರುವ ಸಾಲಿಗರು ಸಾಧ್ಯವಾದಷ್ಟು ಮಟ್ಟಿಗೆ ಕಾಲಬದ್ಧ ರೀತಿಯಲ್ಲಿ ಪ್ರಸ್ತಾವಗಳ ಮೌಲ್ಯಾಂಕನವನ್ನು ಪೂರ್ಣಗೊಳಿಸಲು ಕಾರ್ಯವಿಧಾನಗಳನ್ನು ರೂಪಿಸತಕ್ಕದ್ದು ಹಾಗು ಯುಕ್ತ ಸಮಯದೊಳಗೆ, ಹಣಕಾಸು ನೆರವು ನೀಡುವ ಅಥವ ನೀಡದಿರುವ ಕುರಿತ ತಮ್ಮ ನಿರ್ಣಯವನ್ನು ತಿಳಿಸತಕ್ಕದ್ದು.

**(iii) ನಿಬಂಧನೆಗಳಲ್ಲಿ ಮತ್ತು ಷರತ್ತುಗಳಲ್ಲಿ ಬದಲಾವಣೆ ಸೇರಿದಂತೆ ಸಾಲಗಳ ಬಟವಾಡೆ**

ಸಾಲಿಗರು ಸಾಲಗಳ ಮಂಜೂರಾತಿಗೆ ಅನ್ವಯಿಸುವಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಹಾಗೆ ಮಂಜೂರು ಮಾಡಿದ ಸಾಲಗಳನ್ನು ಸಕಾಲದಲ್ಲಿ ಬಟವಾಡೆ ಮಾಡುವಂತೆ ನೋಡಿಕೊಳ್ಳತಕ್ಕದ್ದು. ಬಡ್ಡಿಯ ದರ, ಸೇವಾ ವೆಚ್ಚಗಳು ಮುಂತಾದವುಗಳು ಸೇರಿದಂತೆ ನಿಬಂಧನೆಗಳಲ್ಲಿನ ಮತ್ತು ಷರತ್ತುಗಳಲ್ಲಿನ ಯಾವುದೇ ಬದಲಾವಣೆಯನ್ನು ಕುರಿತು ಸಾಲಿಗರು ನೋಟೀಸು ನೀಡತಕ್ಕದ್ದು. ಅಲ್ಲದೆ ಸಾಲಿಗರು ಬಡ್ಡಿ ದರಗಳಲ್ಲಿನ ಮತ್ತು ಚಾರ್ಜುಗಳಲ್ಲಿನ ಬದಲಾವಣೆಗಳು ಭವಿಷ್ಯತ್ ಅನ್ವಯವಾಗಿ ಮಾತ್ರ ಜಾರಿಗೆ ಬರುವಂತೆ ನೋಡಿಕೊಳ್ಳತಕ್ಕದ್ದು.

**(iv) ಸಾಲ ಬಟವಾಡೆ ನಂತರದ ಉಸ್ತುವಾರಿ**

(ಎ) ಸಾಲಿಗರಿಂದ, ವಿಶೇಷವಾಗಿ 2 ಲಕ್ಷ ರೂಪಾಯಿಗಳವರೆಗಿನ ಸಾಲದ ಸಂಬಂಧದಲ್ಲಿ ಸಾಲ ಬಟವಾಡೆ ನಂತರದ ಉಸ್ತುವಾರಿಯು, ಸಾಲಗಾರನು ಎದುರಿಸಬಹುದಾದ "ಸಾಲಿಗ ಸಂಬಂಧಿ" ನೈಜ ತೊಂದರೆಯ ಬಗ್ಗೆ ಜಾಗರೂಕತೆ ವಹಿಸುವ ದೃಷ್ಟಿಯಿಂದ ರಚನಾತ್ಮಕವಾಗಿರಬೇಕು.

(ಬಿ) ಒಪ್ಪಂದ ಪತ್ರದ ಅಡಿಯಲ್ಲಿ ಸಂದಾಯಕ್ಕೆ ಮರು ಕರೆ ನೀಡುವ/ ಸಂದಾಯವನ್ನು ತ್ವರಿತಗೊಳಿಸುವ, ಹೆಚ್ಚಿನ ಭದ್ರತೆಗಳನ್ನು ಕೋರುವ ನಿರ್ಣಯವನ್ನು ತೆಗೆದುಕೊಳ್ಳುವ ಮೊದಲು ಸಾಲ ಒಪ್ಪಂದ ಪತ್ರದಲ್ಲಿ ನಿರ್ದಿಷ್ಟಪಡಿಸಿರುವಂತೆ ಸಾಲಗಾರರಿಗೆ ಸಾಲಿಗರು ನೋಟೀಸು ನೀಡತಕ್ಕದ್ದು ಅಥವಾ ಸಾಲ ಒಪ್ಪಂದ ಪತ್ರದಲ್ಲಿ ಅಂಥ ಷರತ್ತು ಇರದಿದ್ದಲ್ಲಿ ಯುಕ್ತ ಅವಧಿಯನ್ನು ನೀಡತಕ್ಕದ್ದು.

(ಸಿ) ಸಾಲಿಗರು ಸಾಲದ ಪಾವತಿಯನ್ನು ಸ್ವೀಕರಿಸಿದ ನಂತರ ಅಥವಾ ಸಾಲ ವಸೂಲಿಯಾದ ನಂತರ, ಸಾಲಿಗರು ಸಾಲಗಾರರ ವಿರುದ್ಧ ಹೊಂದಿರಬಹುದಾದ ಯಾವುದೇ ಇತರ ಕ್ಲೇಮಿಗೆ ಸಂಬಂಧಿಸಿದ ಯಾವುದೇ ಕಾನೂನುಬದ್ದ ಹಕ್ಕು ಅಥವಾ ಧಾರಣಾಧಿಕಾರಕ್ಕೆ ಒಳಪಟ್ಟು ಎಲ್ಲ ಭದ್ರತೆಗಳನ್ನು ಬಿಡುಗಡೆ ಮಾಡತಕ್ಕದ್ದು. ಎದುರು ದಾವೆ ಹಾಕುವ ಅಂಥ ಹಕ್ಕನ್ನು ಚಲಾಯಿಸಿದರೆ, ಅದರ ಬಗ್ಗೆ ಉಳಿದಿರುವ ಕ್ಲೇಮುಗಳು ಮತ್ತು ಸಂಬಂಧಪಟ್ಟ ಕ್ಲೇಮು ತೀರುವವರೆಗೆ / ಸಂದಾಯ ಮಾಡುವವರೆಗೆ ಭದ್ರತೆಗಳನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಸಾಲಿಗರಿಗೆ ಯಾವ ದಸ್ತಾವೇಜುಗಳ ಅಡಿಯಲ್ಲಿ ಹಕ್ಕು ಇದೆಯೋ ಆ ದಸ್ತಾವೇಜುಗಳ ಬಗ್ಗೆ ಪೂರ್ಣ ವಿವರಗಳೊಂದಿಗೆ ಸಾಲಗಾರರಿಗೆ ನೋಟೀಸು ನೀಡತಕ್ಕದ್ದು.

**(v) ಸಾಮಾನ್ಯ**

(ಎ) ಸಾಲಿಗರು, ಸಾಲ ಮಂಜೂರಾತಿ ದಸ್ತಾವೇಜುಗಳ ನಿಬಂಧನೆಗಳಲ್ಲಿ ಮತ್ತು ಷರತ್ತುಗಳಲ್ಲಿ ಉಪಬಂಧಿಸಿರುವುದಕ್ಕೆ ಸಂಬಂಧಪಟ್ಟಂತೆ ಹೊರತು ಸಾಲಗಾರರ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ. (ಸಾಲಗಾರನು ಈ ಮೊದಲು ಬಹಿರಂಗಪಡಿಸಿರದ ಹೊಸ ಮಾಹಿತಿಯು ಸಾಲಿಗನ ಗಮನಕ್ಕೆ ಬಂದ ಹೊರತು).

(ಬಿ) ಸಾಲಿಗರು ಸಾಲ ನೀಡುವ ವಿಷಯದಲ್ಲಿ ಲಿಂಗ, ಜಾತಿ ಮತ್ತು ಮತಗಳ ಕಾರಣಗಳ ಮೇಲೆ ತಾರತಮ್ಯ ಮಾಡತಕ್ಕದ್ದಲ್ಲ. ಆದರೆ ಇದು, ಸಮಾಜದ ದುರ್ಬಲ ವರ್ಗದವರಿಗಾಗಿ ರೂಪಿಸಲಾಗಿರುವ ಸಾಲ ಸಂಬಂಧಿ ಯೋಜನೆಗಳಲ್ಲಿ ಭಾಗವಹಿಸುವುದರಿಂದ ಸಾಲಿಗರನ್ನು ಪ್ರತಿಬಂದಿಸುವುದಿಲ್ಲ.

(ಸಿ) ಸಾಲಗಳನ್ನು ವಸೂಲಿ ಮಾಡುವ ವಿಷಯದಲ್ಲಿ, ಸಾಲಿಗರು ಸಾಲಗಳನ್ನು ವಸೂಲಿ ಮಾಡುವುದಕ್ಕಾಗಿ ಅವೇಳೆಗಳಲ್ಲಿ ಸಾಲಗಾರರಿಗೆ ನಿರಂತರವಾಗಿ ಪೀಡಿಸುವುದು, ತೋಳ್ಬಲ ಬಳಸುವುದು ಮುಂತಾದಂಥ ಅನುಚಿತ ಕಿರುಕುಳ ನೀಡತಕ್ಕದ್ದಲ್ಲ.

(ಡಿ) ಸಾಲ ಖಾತೆಯನ್ನು ವರ್ಗಾವಣೆ ಮಾಡುವುದಕ್ಕಾಗಿ ಸಾಲಗಾರನಿಂದ ಅಥವಾ ಖಾತೆಯನ್ನು ವಹಿಸಿಕೊಳ್ಳಲು ಉದ್ದೇಶಿಸಿರುವ ಬ್ಯಾಂಕಿನಿಂದ/ಹಣಕಾಸು ಸಂಸ್ಥೆಯಿಂದ ಮನವಿ ಬಂದ ಸಂದರ್ಭದಲ್ಲಿ, ಸಾಲಿಗನ ಒಪ್ಪಿಗೆಯನ್ನು ಅಥವಾ ಒಪ್ಪಿಗೆ ಇಲ್ಲದಿರುವುದನ್ನು ಅಂದರೆ ಆತನ ಆಕ್ಷೇಪಣೆಯನ್ನು ಮನವಿ ಬಂದ ದಿನಾಂಕದಿಂದ 21 ದಿವಸಗಳೊಳಗೆ ತಿಳಿಸತಕ್ಕದ್ದು.

3 ಮೇಲಿನ ಪ್ಯಾರಾ 2 ರಲ್ಲಿ ನಿರೂಪಿಸಿರುವ ಮಾರ್ಗಸೂಚಿಗಳನ್ನಾಧರಿಸಿದ ನ್ಯಾಯಪರವಾದ ಪದ್ಧತಿಗಳ ಸಂಹಿತೆಯನ್ನು ಎಲ್ಲಾ ಸಾಲ ನೀಡಿಕೆಗಳ ಸಂಬಂಧದಲ್ಲಿ ಭವಿಷ್ಯತ್ ಅನ್ವಯವಾಗಿ, ಆದರೆ 01 ನೇ ಆಗಸ್ಟ್ 2003ಕ್ಕಿಂತ ತಡವಾಗದಂತೆ ಜಾರಿಗೆ ತರತಕ್ಕದ್ದು. ಮಾರ್ಗಸೂಚಿಗಳ ವ್ಯಾಪ್ತಿಯನ್ನು ವಿಸ್ತರಿಸಿ, ಆದರೆ ಮೇಲಿನ ಮಾರ್ಗಸೂಚಿಗಳಿಗೆ ಒತ್ತು ನೀಡುವಂಥ ಆಶಯವನ್ನು ಯಾವುದೇ ರೀತಿಯಲ್ಲಿ ಬಲಿಗೊಡದಂತೆ ನ್ಯಾಯಪರವಾದ ಪದ್ಧತಿಗಳ ಸಂಹಿತೆಯನ್ನು ಸಿದ್ಧಪಡಿಸುವ ಸ್ವಾತಂತ್ರ್ಯ ಬ್ಯಾಂಕುಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗಿದೆ. ಈ ಉದ್ದೇಶಕ್ಕಾಗಿ, ಬ್ಯಾಂಕುಗಳ ಮತ್ತು ಹಣಕಾಸು ಸಂಸ್ಥೆಗಳ ಮಂಡಲಿಗಳು ಸ್ಪಷ್ಟ ನೀತಿಯೊಂದನ್ನು ನಿರೂಪಿಸತಕ್ಕದ್ದು.

4. ನಿರ್ದೇಶಕರ ಮಂಡಲಿಯು, ಈ ಸಂಬಂಧ ಉದ್ಭವಿಸುವಂತಹ ವಿವಾದಗಳನ್ನು ಪರಿಹರಿಸುವ ಸಲುವಾಗಿ ಸಂಸ್ಥೆಯೊಳಗೆ ಸೂಕ್ತ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಸಹ ರೂಪಿಸತಕ್ಕದ್ದು. ಅಂಥ ವ್ಯವಸ್ಥೆಯು ಸಾಲ ನೀಡುವ ಸಂಸ್ಥೆಗಳ ಕಾರ್ಯಕಾರಿ ನಿರ್ಣಯಗಳಿಂದ ಉದ್ಭವಿಸುವ ಎಲ್ಲ ವಿವಾದಗಳನ್ನು ಮುಂದಿನ ಉನ್ನತ ಹಂತದಲ್ಲಿ ಆಲಿಸಿ ವಿಲೇವಾರಿ ಮಾಡುವುದನ್ನು ಖಚಿತಪಡಿಸತಕ್ಕದ್ದು. ನಿರ್ದೇಶಕರ ಮಂಡಲಿಯು ನ್ಯಾಯ ಪರ ಪದ್ಧತಿಗಳ ಸಂಹಿತೆಯ ಪಾಲನೆಯ ಮತ್ತು ನಿಯಂತ್ರಣ ಕಚೇರಿಗಳ ವಿವಿಧ ಹಂತಗಳಲ್ಲಿನ ಕುಂದುಕೊರತೆ ನಿವಾರಣಾ ವ್ಯವಸ್ಥೆಯ

ಕಾರ್ಯಾನಿರ್ವಹಣೆಯನ್ನು ನಿಯತವಾಗಿ ಪರಿಶೀಲಿಸುವುದಕ್ಕೆ ಸಹ ಅವಕಾಶ ಕಲ್ಪಿಸತಕ್ಕದ್ದು. ಅಂಥ ಪರಿಶೀಲನೆಗಳ ಕ್ರೋಢೀಕೃತ ವರದಿಯನ್ನು ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ನಿಯತ ಅಂತರಗಳಲ್ಲಿ ಅದಕ್ಕೆ ಸಲ್ಲಿಸತಕ್ಕದ್ದು.

5. ಸಂಹಿತೆಯ ಅಳವಡಿಕೆ, ಅಗತ್ಯ ಸಾಲದ ಅರ್ಜಿ ನಮೂನೆಗಳನ್ನು ಮುದ್ರಿಸಿ ಶಾಖೆಗಳಿಗೆ ಮತ್ತು ನಿಯಂತ್ರಣ ಕಚೇರಿಗಳಲ್ಲಿ ಅವುಗಳ ಪರಿಚಲನೆ ಮುಂತಾದ ಕಾರ್ಯಗಳನ್ನು ತಡವೆಂದರೆ 2003ರ ಜೂನ್ ಅಂತ್ಯದ ವೇಳೆಗೆ ಪೂರ್ಣಗೊಳಿಸತಕ್ಕದ್ದು. ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಅಳವಡಿಸಿಕೊಳ್ಳಬಹುದಾದಂಥ ನ್ಯಾಯಪರ ಪದ್ಧತಿಗಳ ಸಂಹಿತೆಯನ್ನು ತಮ್ಮ ವೆಬ್ ಸೈಟ್‌ನಲ್ಲಿ ಸಹ ಅಳವಡಿಸತಕ್ಕದ್ದು ಹಾಗೂ ವ್ಯಾಪಕ ಪ್ರಚಾರ ನೀಡತಕ್ಕದ್ದು. ಒಂದು ಪ್ರತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೂ ರವಾನಿಸತಕ್ಕದ್ದು.

6. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

**(ಎಂ.ಆರ್. ಶ್ರೀನಿವಾಸನ್)**
ಮುಖ್ಯ ಪ್ರಧಾನ ವ್ಯವಸ್ಥಾಪಕ – ಪ್ರಭಾರ.